ಓ ಎಸ್ ನಂಃ 34/19
ಡಿ ಡಬ್ಲ್ಯೂ ಃ 1

ದಿಃ 03.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ. ಜಿ ಪಿ ವಕೀಲರಿಂದಃ**

ಶಿವಣ್ಣರವರಿಗೆ ತಮ್ಮ ತಂದೆಯವರು ಕೊಡಿಸಿರುವ ಸ್ವತ್ತಿನ ಕ್ರಯಪತ್ರವನ್ನು ತಾವೇನಾದರೂ ನ್ಯಾಯಾಲಯಕ್ಕೆ ಈ ದಿನ ತಂದಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಕ್ರಯಪತ್ರವು ನಮ್ಮ ಬಳಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಪೌಢ ಶಾಲೆಯಲ್ಲಿ ಗುಮಾಸ್ತನಾಗಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿ. ಈ ದಾವೆಯನ್ನು ಸಲ್ಲಿಸುವುದಕ್ಕೆ ಮುಂಚೆ ವಾದಿಯು ತಮ್ಮ ವಕೀಲರ ಮುಖಾಂತರ ಒಂದು ನೋಟಿಸನ್ನು ಜಾರಿ ಮಾಡಿರುತ್ತಾರೆ ಎಂದರೆ ಸರಿ. ದಾವಾ ಐಟಂ ನಂ.2 ರ ಸ್ವತ್ತು ತಮ್ಮ ಅಜ್ಜಿ ಪಾರ್ವತಮ್ಮರವರ ಹೆಸರಿನಲ್ಲಿರುತ್ತದೆ ಎಂದರೆ ಸರಿ. ಸದರಿ ಸ್ವತ್ತು ತಮ್ಮ ಅಜ್ಜಿಯವರಿಗೆ ಯಾವುದರ ಮುಖಾಂತರ ಬಂದಿದೆ ಎಂಬ ವಿಚಾರವನ್ನು ತಾವೇನಾದರೂ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಪಾರ್ವತಮ್ಮರವರ ಹೆಸರಿನಲ್ಲಿದ್ದ ಜಮೀನು ತಮ್ಮ ತಂದೆ ಸಿದ್ದಲಿಂಗಯ್ಯರವರ ಹೆಸರಿಗಾಗಲೀ ಅಥವಾ ಅವರ ಸಹೋದರರ ಹೆಸರಿಗಾಗಲೀ ವಿಭಾಗ ಆಗಿಲ್ಲ ಎಂದರೆ ಸರಿ. ದಾವ ಐಟಂ ನಂ.2 ರ ಸ್ವತ್ತಿನ ಖಾತೆಯು ಪ್ರಸ್ತುತ ಪಾರ್ವತಮ್ಮನವರ ಹೆಸರಿನಲ್ಲಿರುತ್ತದೆ. ದಾವ ಐಟಂ ನಂ.1ರ ಸ್ವತ್ತಿಗೆ ಸಂಬಂದಪಟ್ಟಂತೆ ತಮ್ಮ ತಂದೆ ಹಾಗೂ ಅವರ ಸಹೋದರರಿಗೆ ಭಾಗ ಆಗಿಲ್ಲ ಎಂದರೆ ಸರಿ. ದಾವ ಐಟಂ ನಂ.1ರ 16 ಗುಂಟೆ ಜಮೀನು ತಾವು ಶಿವಕುಮಾರಸ್ವಾಮಿರವರಿಗೆ ಮಾರಾಟ ಮಾಡುವುದರ ಮುಂಚೆ ವಾದಿಯು ತಮ್ಮ ವಕೀಲರ ಮುಖಾಂತರ ತಮಗೆ ನೀಡಿರುವ ನೋಟಿಸು ಜಾರಿಯಾಗಿದೆ ಎಂದರೆ ಸರಿಯಲ್ಲ. ದಿನಾಂಕಃ 18-04-2018ರಂದು ವಾದಿಯು ತಮಗೆ ನೋಟಿಸು ಜಾರಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವ ಐಟಂ ನಂ.1 ರ ಸ್ವತ್ತನ್ನು ತಾವು ಮಾರಾಟ ಮಾಡಿರುವ ದಿನಾಂಕಃ 06-06-2019ರ ಎಂದರೆ ಸಾಕ್ಷಿ ಈಗ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ಅದು ಅಂಚೆ ಸ್ವೀಕೃತಿಯಾಗಿದ್ದು ಸದರಿ ದಾಖಲಾತಿಯನ್ನು ಹಾಗೂ ಸದರಿ ದಾಖಲಾತಿಯಲ್ಲಿರುವ ಸಹಿಯನ್ನು ಸಾಕ್ಷಿ ಒಪ್ಪಿದ್ದು, ಸಾಕ್ಷಿ ಒಪ್ಪಿಗೆ ಮೇರೆಗೆ ನಿಪಿ20 ಎಂದು, ಸಾಕ್ಷಿಯ ಸಹಿಯನ್ನು ನಿಪಿ 20(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು ಅದು ಅಂಚೆ ಸ್ವೀಕೃತಿಯಾಗಿದ್ದು ಸಾಕ್ಷಿ ಒಪ್ಪಿಗೆ ಮೇರೆಗೆ ಅದನ್ನು ನಿಪಿ 21 ಎಂದು ಗುರುತಿಸಲಾಯಿತು. ನಿಪಿ20ರ ನೋಟಿಸು ದಿನಾಂಕಃ 20-04-2018ರಂದು ಜಾರಿಯಾಗಿದೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ತಮಗೆ ವಾದಿಯು ನೋಟಿಸು ಜಾರಿಮಾಡಿದ ಮೇಲೆ ವಾದಿಗಳಿಗೆ ಭಾಗ ಕೊಡಬಾರದು

ಎಂಬ ದುರುದ್ದೇಶದಿಂದ ದಾವ ಐಟಂ ನಂ.1ರ ಸ್ವತ್ತಿನ 16 ಗುಂಟೆ ಜಮೀನನ್ನು ಶಿವಕುಮಾರಸ್ವಾಮಿರವರಿಗೆ ಮಾರಾಟ ಮಾಡಿದ್ದೀರಾ ಎಂದರೆ ಸರಿ. ಸದರಿ ಜಮೀನಿಗೆ ಸಂಬಂದಪಟ್ಟಂತೆ ನಾನು ನಮ್ಮ ವಕೀಲರಿಗೆ ಲಿಖಿತ ಹೇಳಿಕೆಯನ್ನು ತಯಾರು ಮಾಡುವ ಸಮಯದಲ್ಲಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ತಮ್ಮ ಲಿಖಿತ ಹೇಳಿಕೆಯಲ್ಲಿ ದಾವ ಐಟಂ ನಂ.1ರ ಸ್ವತ್ತನ್ನು ಶಿವಕುಮಾರಸ್ವಾಮಿರವರಿಗೆ ಮಾರಾಟ ಮಾಡಿರುವ ವಿಚಾರವನ್ನು ದುರುದ್ದೇಶ ಪೂರ್ವಕವಾಗಿ ಬರೆಸಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಯವರು ಹುಟ್ಟಿದ ಸ್ಥಳ ಬೈಲಂಡಳ್ಳಿಯಾಗಿರುತ್ತದೆ. ತಮ್ಮ ತಂದೆಯವರು ಅಣ್ಣ ತಮ್ಮಂದಿರು ಯಾವ ಊರಿನಲ್ಲಿ ಜನಿಸಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಶಿವಣ್ಣರವರು ಸುಮಾರು 120 ವರ್ಷಗಳ ಹಿಂದೆ ಬಂಡೆಮಠಕ್ಕೆ ಬಂದು ಅಲ್ಲಿಯೇ ವಾಸವಾಗಿದ್ದರು ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ನಮ್ಮ ತಂದೆಯು 2004ನೇ ಸಾಲಿನಲ್ಲಿ ಮೃತರಾಗಿರುತ್ತಾರೆ ಆಗ ಅವರಿಗೆ ಸುಮಾರು 70ವರ್ಷ ವಯಸ್ಸಾಗಿರಬಹುದು. ಬೈಲಂಡಳ್ಳಿ ಗ್ರಾಮಕ್ಕೆ ಸೇರಿದ ಜಮೀನುಗಳು ಶಿವಣ್ಣರವರ ಹೆಸರಿನಲ್ಲಿತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದಾದರೂ ದಾಖಲಾತಿಯನ್ನು ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ತಮ್ಮ ಪ್ರತಿವಾದ ಪತ್ರದಲ್ಲಿ ಹೇಳಿ ಬರೆದಿಸಿದ್ದೀರಿ ಶಿವಣ್ಣರವರ ಕುಟುಂಬದವರು 100 ವರ್ಪೆಗಳ ಹಿಂದೆ ಬೇರೆ ಬೇರೆ ವಾಸಮಾಡುತ್ತಿದ್ದರು ಆ ಸಮಯದಲ್ಲಿ ತಮ್ಮ ತಂದೆ ಸಿದ್ದಲಿಂಗಪ್ಪರವರು ಜನಿಸಿರಲಿಲ್ಲ ಎಂದರೆ ಗೊತ್ತಿಲ್ಲ. ತಮ್ಮ ತಂದೆ ಸಿದ್ದಲಿಂಗಯ್ಯರವರು 1931ನೇ ಸಾಲಿನಲ್ಲಿ ಜನಿಸಿದ್ದರು ಎಂದರೆ ಇರಬಹುದು ಎಂದು ನುಡಿಯುತ್ತಾರೆ. ತಮ್ಮ ತಾತ 1920ನೇ ಸಾಲಿನಿಂದ ಬೈಲಂಡಳ್ಳಿಯನ್ನು ತೊರೆದು ಬಂಡೆಮಠದಲ್ಲಿ ವಾಸಮಾಡುತ್ತಿದ್ದರು ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ಲಿಖಿತ ಹೇಳಿಕೆಯನ್ನು ತಯಾರು ಮಾಡಲು ನಾನೇ ನೀಡಿರುತ್ತೇನೆ. ಸದರಿ ವಿಚಾರ ತಮಗೆ ಖುದ್ದು ಗೊತ್ತು ಎಂದರೆ ಸಾಕ್ಷಿ ಹೌದು ನುಡಿಯುತ್ತಾರೆ.

ತಮ್ಮ ತಂದೆ ಕಂಟ್ರಾಕ್ಟರ್ ಕೆಲಸ ಮಾಡುತಿದ್ದರು. ನಮ್ಮ ತಂದೆಯವರು ಖಾಸಗಿ ಗುತ್ತಿಗೆಯನ್ನು ಸಹ ಮಾಡುತ್ತಿದ್ದರು. ತಮ್ಮ ತಂದೆಯು ಪಿಡಬ್ಲುಡಿ ನಲ್ಲಿ ಕಂಟ್ರಾಕ್ಟರ್ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ತಮ್ಮ ತಂದೆಯವರು ಕಂಟ್ರಾಕ್ಟರ್ ಕೆಲಸ ಮಾಡುತ್ತಿದ್ದರು ಎಂದು ತೋರಿಸಲು ಪರವಾನಿಗೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ತಮ್ಮ ತಂದೆಯವರು ಯಾವುದೇ ಕಂಟ್ರಾಕ್ಟರ್ ಕೆಲಸ ಮಾಡುತ್ತಿರಲಿಲ್ಲ ಆದ ಕಾರಣ ತಾವು ಸದರಿ ವಿಚಾರಕ್ಕೆ ಸಂಬಂದಪಟ್ಟಂತೆ ಯಾವುದೇ ದಾಖಲಾತಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿ. ದಾವ ಐಟಂ ನಂ.1 ರ ಸ್ವತ್ತಿನಲ್ಲಿ ಸರ್ವೆ ನಂ.11 ರಲ್ಲಿ 1 ಎಕರೆ ಜಮೀನನ್ನು ದಿನಾಂಕಃ 06-06-2019ರಂದು ರೋಹಿತ್ ರವರಿಗೆ ಮಾರಾಟ ಮಾಡಿದ್ದೀರಾ ಎಂದರೆ ಸರಿ. ರೋಹಿತ್ ರವರು ಈ ದಾವೆಯ 11 ನೇ ಪ್ರತಿವಾದಿ ಎಂದರೆ

ಸರಿ. ಸದರಿರವರು ತಮ್ಮ ಚಿಕ್ಕಪ್ಪರವರ ಮಗ ಎಂದರೆ ಸರಿ. ಸದರಿ ಜಮೀನನ್ನು ರೋಹಿತ್ ರವರಿಗೆ ಮಾರಾಟ ಮಾಡುವ ಮುಂಚೆ ವಾದಿಯು ಈ ದಾವೆಯನ್ನು ಸಲ್ಲಿಸಿದ್ದರು ಎಂದರೆ ಸರಿ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**